

ಟಾರ್ ಬ್ರೌಸರ್ ಅನ್ನು ಡೌನ್ ಲೋಡ್ ಮಾಡಿಕೊಂಡಾಕ್ಷಣ, ಇತರ ಬ್ರೌಸರ್‌ಗಳಂತೆ ಸಲೀಸಾಗಿ ನ್ಯಾವಿಗೇಟ್ ಮಾಡಲು ಸಾಧ್ಯವಿಲ್ಲ. ಅಲ್ಲಿರುವ ಎಲ್ಲರೂ ಅಜ್ಞಾತವಾಗಿ ವ್ಯವಹರಿಸುವುದರಿಂದ ನಮಗೆ ಬೇಕಾದುದನ್ನು ಹುಡುಕುವುದು ಅಷ್ಟು ಸುಲಭವಲ್ಲ. ನಾವು ಕೇಳುವ ವೆಬ್ ಪೇಜನ್ನು ವಿಶ್ವದಾದ್ಯಂತ ಇರುವ ಹಲವಾರು ಕಾರ್ಯಕರ್ತರು, ಅನೇಕ ಪ್ರಾಕ್ಸಿ ಸರ್ವರ್‌ಗಳ ಮೂಲಕ ರೂಟ್ ಮಾಡುತ್ತಾರೆ. ಹೀಗಾಗಿ ಬಳಕೆದಾರರ ಐ.ಪಿ. ವಿಳಾಸವನ್ನಾಗಲೀ, ಜಾಲತಾಣದ ಐ.ಪಿ. ವಿಳಾಸವನ್ನಾಗಲೀ ಯಾರಿಗೂ ಕಂಡುಹಿಡಿಯಲು ಸಾಧ್ಯವಿಲ್ಲ. ಇಷ್ಟೆಲ್ಲ ಮಾಡಿ ಜಾಲತಾಣಕ್ಕೆ ಪ್ರವೇಶ ಪಡೆದರೂ ಪರಿಣಾಮ ಅನಿಶ್ಚಿತ. ಕರಾಳ ಜಾಲ ಬಳಸಿದ ಪರಿಣಿತರಿಗೂ ಸಹ ಅದರ ನಿರಂತರವಾಗಿ ಬದಲಾಗುವ ಭೌಗೋಳಿಕ ನಕ್ಷೆಯಿಂದಾಗಿ ತಮ್ಮ ದಾರಿಯನ್ನು ಪತ್ತೆ ಮಾಡುವುದು ಸವಾಲಾಗಿಯೇ ಕಾಣುತ್ತದೆ. ಇದರ ಸಹವಾಸವೇ ಬೇಡ ಎನಿಸುವಂತೆ ಅನೇಕ ಬಾರಿ 'ಟೈಮ್ಡ್ ಔಟ್ ಕನೆಕ್ಷನ್' ಮತ್ತು '404 ಎರರ್'ಗಳು ಕಾಣಿಸಿಕೊಳ್ಳುತ್ತವೆ. ಇದೆಲ್ಲವನ್ನೂ ಸಹಿಸಿ ಮುಂದುವರಿದವರಿಗೆ ಕರಾಳ ಜಾಲದ 'ದರ್ಶನ'. ಉದಾಹರಣೆಗೆ, ಹಣಕೊಡದೆ 'ನ್ಯೂಯಾರ್ಕ್ ಟೈಮ್ಸ್' ಅನ್ನು ಇಲ್ಲಿ ಓದಬಹುದು. nytimes3xbfgragh.onion ಟಾರ್‌ನಲ್ಲಿ ಮಾತ್ರ ಲಭ್ಯ.

## ಏನೇನು ಲಭ್ಯ?

ಡಾರ್ಕ್ ನೆಟ್‌ನಲ್ಲಿ ಸುಪಾರಿ ಕೊಲೆಗಾರರು ದೊರೆಯುತ್ತಾರೆ. ಈಗಾಗಲೇ ಇರುವ ಅಶ್ಲೀಲ ಚಿತ್ರಗಳನ್ನು ಬಳಸಿ ಅಥವಾ ಅಂತಹ ಚಿತ್ರಗಳನ್ನು ಫೋಟೊ ಶಾಪ್‌ನಲ್ಲಿ ಸಿದ್ಧಪಡಿಸುವ ಜನರು ಸಿಗುತ್ತಾರೆ. ಸಿಲ್ಕ್ ರೋಡ್‌ನಂತಹ ಜಾಲತಾಣಗಳಲ್ಲಿ ಮಾದಕ ವಸ್ತುಗಳನ್ನು ಮಾರಬಹುದು ಅಥವಾ ಕೊಳ್ಳಬಹುದು. ಅಲ್ಲಿ ಹೆಣ್ಣುಮಕ್ಕಳ ಮಾರಾಟ ರಾಜಾರೋಷವಾಗಿ ನಡೆಯುತ್ತಿದೆ. ಉಗ್ರಗಾಮಿಗಳ ನೇಮಕಾತಿಗಾಗಿ ಜಾಹೀರಾತನ್ನು, ನೇಮಕಾತಿಯನ್ನೂ, ಆಕ್ರಮಣಗಳ ಯೋಜನೆಯನ್ನೂ ಇಲ್ಲಿ ಮಾಡುತ್ತಾರೆ.

ಇತರರ ಕ್ರೆಡಿಟ್ ಕಾರ್ಡ್ ನಂಬರ್‌ಗಳನ್ನು ಇಲ್ಲಿ ಕೊಳ್ಳಬಹುದು, ಹ್ಯಾಕ್ ಆದ ನೆಟ್‌ಫ್ಲಿಕ್ಸ್ ಅಕೌಂಟುಗಳನ್ನು ಅಗ್ಗವಾಗಿ ಕೊಳ್ಳಬಹುದು. ಇತರರ ಕಂಪ್ಯೂಟರ್‌ನಲ್ಲಿ ಅನದಿಕೃತವಾಗಿ ಪ್ರವೇಶಿಸಲು ಸಾಧ್ಯ ಮಾಡುವ ತಂತ್ರಾಂಶವನ್ನು ಕೊಳ್ಳಬಹುದು. ಪಾಕ ಶಾಸ್ತ್ರ ವಿಧಾನವನ್ನು ಇಲ್ಲಿ ಕಲಿಯಬಹುದು.

## ಬಿಟ್ ಕಾಯಿನ್

ಈ ಗುಪ್ತ–ಅಜ್ಞಾತ ಜಾಲತಾಣಗಳಿಗೆ ಹಣ ಸಂದಾಯ ಹೇಗೆ ಮಾಡುವುದು? ಅಪರಿಚಿತ ಗ್ರಾಹಕ ಹಾಗೂ ಮಾರಾಟಗಾರನ ನಡುವೆ ವಿಶ್ವಾಸಾರ್ಹವಾಗಿ ಹಣದ ವಹಿವಾಟು 'ಬಿಟ್ ಕಾಯಿನ್' ಮೂಲಕ ನಡೆಯುತ್ತದೆ. ಕರಾಳ ಜಾಲದ ಬಹುತೇಕ ವಹಿವಾಟು ಇದರಿಂದಲೇ ನಡೆಯುತ್ತಿದ್ದು ಅದರ ಕ್ಷಿಪ್ರ ಬೆಳವಣಿಗೆಯಲ್ಲಿ ಇದರ ಪಾತ್ರ ದೊಡ್ಡದು.

ಬಿಟ್ ಕಾಯಿನ್ ಎಂಬುದು ಹವಾಲ ವ್ಯವಹಾರ ಇದ್ದಂತೆ. ಇದು ಡಿಜಿಟಲ್ ಕರೆನ್ಸಿ. ಸತೋಷಿ ನಕಮೋಟೋ ಎಂಬ ಮಿಥ್ಯ ನಾಮದ ವ್ಯಕ್ತಿಯೊಬ್ಬ 2009ರಲ್ಲಿ ಕಂಡುಹಿಡಿದ ವ್ಯವಸ್ಥೆ. ಹಣ ಟ್ರಾನ್ಸ್‌ಫರ್ ಮಾಡಲು ಅತ್ಯಂತ ಕನಿಷ್ಠ ಸೇವಾ ಶುಲ್ಕ ಪಡೆಯುತ್ತಾರೆ. ಆದರೆ ಇದನ್ನು ನಿಯಂತ್ರಿಸುವ ಯಾವುದೇ ಅಧಿಕೃತ ಬ್ಯಾಂಕುಗಳಾಗಲೀ, ಸರ್ಕಾರವಾಗಲೀ ಇಲ್ಲ.

## ಕಳ್ಳತನದಲ್ಲಿ ಮೋಸ

ಸಾಧಾರಣ ಮಾರಾಟ ಜಾಲಗಳಲ್ಲಿ ಇರುವಂತೆ ಇಲ್ಲೂ ರೇಟಿಂಗ್, ವ್ಯೂಸ್, ಶಾಪಿಂಗ್ ಕಾರ್ಟ್ ಮತ್ತು ಫೋರಂಗಳು ಇರುತ್ತವೆ. ಆದರೆ ಗ್ರಾಹಕರು ಮಾರಾಟಗಾರರು ಅಪರಿಚಿತರಾಗಿರುವಾಗ, ಅವರು ಬಳಸುವ ಯು.ಆರ್.ಎಲ್.ಗಳೇ ಖೋಟಾ ಆಗಿರುವಾಗ ಇವನ್ನು ಸುಳ್ಳು ಸೃಷ್ಟಿಸಿರುವುದಿಲ್ಲ ಎಂದು ಏನು ಖಾತರಿ?

ಸಾಧಾರಣ ವ್ಯಾಪಾರದಲ್ಲಿ ಗ್ರಾಹಕರಿಗೆ ತನ್ನ ವಸ್ತು ತಲುಪುವವರೆಗೂ ಆತ ಕೊಟ್ಟಿರುವ ಹಣವನ್ನು ಮಾರಾಟಗಾರನಿಗೆ ಕೊಡದೆ ಅದರ ರಕ್ಷಣೆ ಮಾಡುವ 'ಎಸ್ಕ್ರೋ' ವ್ಯವಸ್ಥೆ ಇರುತ್ತದೆ. ಆದರೆ ಕರಾಳ ಜಾಲದಲ್ಲಿ ಅದು ಇಲ್ಲ. ವಸ್ತು ಆಯ್ಕೆ ಮಾಡಿಕೊಂಡ ಮೇಲೆ, ಹಣ ಪಾವತಿಸಿದ ಮೇಲೂ ಮಾಲು ಕೈ ಸೇರುವ ಖಾತ್ರಿ ಇರುವುದಿಲ್ಲ. ಅವರು ಅದನ್ನು ಕಳಿಸಿದರೂ ಸಹ, ಬೇಡಿಕೆಯ ವಸ್ತು (ಅನೈತಿಕ ವಸ್ತು) ಅಂತರರಾಷ್ಟ್ರೀಯ ಗಡಿಗಳನ್ನು ದಾಟಿ, ಕಸ್ಟಂ ಅಧಿಕಾರಿಗಳ ಕೈ ತಪ್ಪಿಸಿ ಗ್ರಾಹಕನ ಕೈ ಸೇರಿಸಬೇಕಿದೆ. ಅನುಮಾನಾಸ್ಪದವಾಗಿ ಕಂಡ ಪಾರ್ಸಲ್‌ಗಳನ್ನು ಕಸ್ಟಂನವರು ಬಿಡಿಸಿ ನೋಡಬಹುದು. ಮತ್ತು ಪಡೆಯುವವರಿಗೆ ಶಿಕ್ಷೆಯನ್ನೂ ನೀಡಬಹುದು.

ಹಣ ಪಡೆದುಕೊಂಡ ನಂತರವೂ ತಮ್ಮ ಸೇವೆ/ ವಸ್ತುಗಳನ್ನು ನೀಡದ ವಂಚಕರು ಅನೇಕ ಕರಾಳ ಜಾಲ ತಾಣಗಳನ್ನು ನಿರ್ಮಿಸಿರುತ್ತಾರೆ. ಮೋಸಹೋದ ಗ್ರಾಹಕರ ಆಗ್ರಹದಿಂದ ತಪ್ಪಿಸಿಕೊಳ್ಳಲು ತಮ್ಮ ತಾಣ ವಿಳಾಸವನ್ನು ಆಗ್ಗಿಂದಾಗ್ಗೆ ಬದಲಿಸುತ್ತಲಿರುತ್ತಾರೆ.

Deep.dot.web ಎಂಬ ಕರಾಳ ಜಾಲದ ವಾರ್ತಾ ತಾಣದಲ್ಲಿ ಅನೈತಿಕ ವಸ್ತುಗಳನ್ನು ಕೊಳ್ಳಲು ಪ್ರಯತ್ನಿಸಿ ಸಿಕ್ಕಿ ಹಾಕಿಕೊಂಡವರು